# ಚಿತ್ತಶುದ್ಧಿ



ಅತ್ಯಂತ ಉದಾರ ಮತ್ತು ಸರಳ ಹೃದಯದವನಾಗದಿದ್ದರೆ, ಮನುಷ್ಯ ಭಗವಂತನನ್ನು ಪಡೆಯಲಾರ.. ವಿಷಯಬುದ್ಧಿ ಹೋಗದ ಹೊರತು ಉದಾರತೆ, ಸರಳತೆ ಬರದು.

ಕನ್ನಡಿಯ ಮೇಲೆ ಧೂಳು ಕವಿದಿದ್ದರೆ ಮುಖ ಕಾಣಿಸದು. ಚಿತ್ತಶುದ್ಧವಿಲ್ಲದಿದ್ದರೆ ಸ್ವಸ್ವರೂಪದ ದರ್ಶನ ದೊರೆಯದು, ನೋಡಿ, ಎಲ್ಲಿ ಅವತಾರಪುರುಷ ಜನ್ಮವೆತ್ತುವನೊ ಅಲ್ಲಿ ಸರಳತೆ ತಾಂಡವವಾಡುತ್ತದೆ. ನಂದ, ದಶರಥ, ವಸುದೇವ — ಇವರೆಲ್ಲರೂ ಸರಳ ಜೀವಿಗಳೆ.

ವೇದಾಂತ ಹೇಳುತ್ತದೆ, ‘ಚಿತ್ತ ಪರಿಶುದ್ಧವಾಗಿಲ್ಲದೆ ಇದ್ದರೆ ಭಗವಂತನನ್ನು ಪಡೆಯಬೇಕು ಎಂಬ ಇಚ್ಛೆಯೆ ಬರದು’ ಅಂತ. ಹಿಂದಿನ ಜನ್ಮದಲ್ಲಿಯೆ ಆಗಲಿ ಅಥವಾ ಈ ಜನ್ಮದಲ್ಲಿಯೆ ಆಗಲಿ ವಿಶೇಷವಾಗಿ ತಪಸ್ಸು ಮಾಡದಿದ್ದರೆ ಸರಳತೆ ಉದಾರತೆ ಉಂಟಾಗದು.

ಯಾವುದು ಶುದ್ಧ ಆತ್ಮವೊ ಅದು ನಿರ್ಲಿಪ್ತವಾದುದು. ಅದರಲ್ಲಿ ಮಾಯೆ ಅಥವಾ ಅವಿದ್ಯೆ ಇದೆ. ಈ ಮಾಯೆಗೆ ಸತ್ತ್ವ, ರಜಸ್ಸು, ತಮಸ್ಸು ಎಂಬ ಮೂರು ಗುಣಗಳಿವೆ. ಯಾವುದು ಶುದ್ಧ ಆತ್ಮವೋ ಅದರಲ್ಲಿಯೂ ಈ ಮೂರು ಗುಣಗಳು ಇದ್ದೇ ಇವೆ. ಆದರೂ ಅದು ನಿರ್ಲಿಪ್ತವೆ. ಬೆಂಕಿಗೆ ನೀಲಿ ಉಂಡೆ ಬಿಸಾಡಿದರೆ ನೀಲಿ ಬಣ್ಣದ ಉರಿ ಏಳುತ್ತದೆ. ಕೆಂಪು ಉಂಡೆ ಬಿಸಾಡಿದರೆ ಕೆಂಪು ಬಣ್ಣದ ಉರಿ ಏಳುತ್ತದೆ. ಆದರೆ, ಬೆಂಕಿಗೆ ತನ್ನದೇ ಆದ ಯಾವ ಬಣ್ಣವೂ ಇಲ್ಲ.

ನೀರಿಗೆ ನೀಲಿ ಬಣ್ಣ ಕದಡಿದರೆ ಅದು ನೀಲಿಯಾಗಿ ಕಾಣುತ್ತದೆ. ಮತ್ತೆ ಅದಕ್ಕೇನೆ ಸ್ಪಟಿಕ ಹಾಕಿದರೆ ಅದು ತನ್ನ ಸ್ವರೂಪವನ್ನು ಪಡೆಯುತ್ತದೆ.

ಒಬ್ಬ ಚಂಡಾಲ ಮಾಂಸದ ಹೊರೆಯನ್ನು ಹೊತ್ತುಕೊಂಡು ಹೋಗುತ್ತಿದ್ದ. ಆತ ಶ್ರೀಶಂಕರಾಚಾರ್ಯರನ್ನು ಮುಟ್ಟಿಬಿಟ್ಟ. ಶಂಕರಾಚಾರ್ಯರು, ‘ಏನು, ನನ್ನನ್ನು ಮುಟ್ಟಿಬಿಟ್ಟೆಯಲ್ಲ?’ ಅಂತ ರೇಗಿದರು. ಚಂಡಾಲ ಉತ್ತರವಿತ್ತ: ‘ಪೂಜ್ಯರೆ! ನಾನು ನಿಮ್ಮನ್ನು ಮುಟ್ಟಲಿಲ್ಲ. ನೀವೂ ನನ್ನನ್ನು ಮುಟ್ಟಲಿಲ್ಲ, ನೀವು ಶುದ್ಧ ನಿರ್ಲಿಪ್ತ ಆತ್ಮ’ ಎಂದು. ಜಡಭರತ ಇದೇ ಮಾತನ್ನು ರಾಜ ರಹೂಗಣನಿಗೆ ಹೇಳಿದ.

ಶುದ್ಧ ಆತ್ಮ ನಿರ್ಲಿಪ್ತವಾದದ್ದು. ಅದನ್ನು ಕಣ್ಣಿನಿಂದ ನೋಡಲಾಗುವುದಿಲ್ಲ, ನೀರಿನಲ್ಲಿ ಉಪ್ಪು ಬೆರೆತುಕೊಂಡಿದ್ದರೆ, ಅದನ್ನು ಕಣ್ಣಿನಿಂದ ನೋಡಲಾಗುವುದಿಲ್ಲ.

ಯಾವುದು ಶುದ್ಧ ಆತ್ಮವೊ, ಅದೇ ಮಹಾಕಾರಣ — ಕಾರಣದ ಕಾರಣ. ಸ್ಥೂಲ, ಸೂಕ್ಷ್ಮ, ಕಾರಣ ಮತ್ತು ಮಹಾಕಾರಣ. ಪಂಚಭೂತಗಳು ಸ್ಥೂಲ. ಮನಸ್ಸು, ಬುದ್ಧಿ, ಅಹಂಕಾರ, ಸೂಕ್ಷ್ಮ. ಪ್ರಕೃತಿ ಅಥವಾ ಆದ್ಯಾಶಕ್ತಿ ಎಲ್ಲದರ ಕಾರಣ. ಬ್ರಹ್ಮ ಅಥವಾ ಶುದ್ಧ ಆತ್ಮ, ಕಾರಣದ ಕಾರಣ.

ಈ ಶುದ್ಧ ಆತ್ಮವೆ ನಮ್ಮ ಸ್ವಸ್ವರೂಪ. ಯಾವುದಕ್ಕೆ ಜ್ಞಾನ ಎಂದು ಹೆಸರು? ಈ ಸ್ವಸ್ವರೂಪವನ್ನು ಅರಿತುಕೊಳ್ಳುವುದು ಮತ್ತು ಅದರಲ್ಲೇ ಮನಸ್ಸನ್ನಿಡುವುದು, ಈ ಶುದ್ಧ ಆತ್ಮವನ್ನು ಅರಿತುಕೊಳ್ಳುವುದು.

ಸುಮ್ಮನೆ ಓದಿಬಿಟ್ಟರೆ ಏನಾದೀತು? ಸಾಧನೆ-ತಪಸ್ಸು ಬೇಕು. ಕರೆ ಆತನನ್ನು, ಸುಮ್ಮನೆ ‘ಸಿದ್ಧಿ, ಸಿದ್ಧಿ’ ಎಂದು ಹೇಳಿದರೆ ಅಮಲೇರುವುದೆ? ಅದನ್ನು ಅರೆದು ಕುಡಿಯಬೇಕು.

ಈ ಸಂಸಾರ ಒಂದು ಮುಳ್ಳುಗಿಡ. ಕೈ ಹಾಕಿತು ಅಂದರೆ ತರಚಿ ರಕ್ತಸುರಿಯಲಾರಂಭಿಸುತ್ತದೆ. ಒಂದು ಮುಳ್ಳುಗಿಡ ತೆಗೆದುಕೊಂಡು ಬಂದು ಅದರ ಹತ್ತಿರ ಕುಳಿತುಕೊಂಡು ಜಪಿಸು: ‘ಈ ಗಿಡ ಸುಟ್ಟುಹೋಯಿತು’ ಎಂದು. ಅದಷ್ಟಕ್ಕೆ ಅದು ಸುಟ್ಟು ಹೋಗುತ್ತದೆಯೆ? ಜ್ಞಾನಾಗ್ನಿಯನ್ನು ಹೊತ್ತಿಸಿಕೊ. ಆ ಅಗ್ನಿಯಿಂದ ಅದನ್ನು ಸುಡು. ಆಗ ಮಾತ್ರವೆ ಅದು ಸುಟ್ಟು ಬೂದಿಯಾಗುತ್ತದೆ.

ಸಾಧನೆಯ ಸಮಯದಲ್ಲಿ ಸ್ವಲ್ಪ ಹೆಚ್ಚು ಶ್ರಮ ತೆಗೆದುಕೊಳ್ಳಬೇಕು. ಆ ಬಳಿಕ ರಾಜರಸ್ತೆ. ನದಿ ಡೊಂಕಾಗಿ ಹರಿಯುವ ಜಾಗದಲ್ಲಿ ಸ್ವಲ್ಪ ಶ್ರಮ ತೆಗೆದುಕೊಂಡು ಮುಂದುವರಿದು, ಬಳಿಕ ಅನುಕೂಲವಾದ ಗಾಳಿ ದೊರೆತಾಗ ದೋಣಿಯನ್ನು ಸುಮ್ಮನೆ ತೇಲಿಬಿಡು.

ಎಲ್ಲಿಯವರೆಗೆ ನೀನು ಮಾಯೆಯ ಮನೆಯೊಳಗೆ ಇರುವೆಯೊ, ಎಲ್ಲಿಯವರೆಗೆ ಮಾಯೆಯ ಮೋಡ ಮೇಲೆ ಕವಿದುಕೊಂಡಿರುತ್ತದೆಯೋ, ಅಲ್ಲಿಯವರೆಗೆ ಜ್ಞಾನಸೂರ್ಯನ ಪ್ರಭಾವ ಗೊತ್ತಾಗದು. ಮಾಯೆಯ ಗೃಹವನ್ನು ತ್ಯಜಿಸಿ (ಕಾಮ ಕಾಂಚನ ತ್ಯಜಿಸಿ) ಹೊರಗಡೆ ಬಂದು ನಿಂತುಕೊಂಡರೆ ಆಗ ಜ್ಞಾನಸೂರ್ಯ ಅವಿದ್ಯೆಯನ್ನು ನಾಶ ಮಾಡುತ್ತಾನೆ. ಮನೆಯ ಒಳಗೆ ನಿಂತರೆ ಲೆನ್ಸು ಕಾಗದವನ್ನು ಸುಡಲಾರದು. ಮನೆಯಿಂದ ಹೊರಗೆ ಬಂದು ನಿಂತರೆ ಬಿಸಿಲು ಲೆನ್ಸಿನ ಮೇಲೆ ಬೀಳುತ್ತದೆ, — ಆಗ ಕಾಗದ ಸುಟ್ಟುಹೋಗುತ್ತದೆ. ಮತ್ತೆ ಆಕಾಶ ಮೋಡದಿಂದ ಕೂಡಿದ್ದರೆ ಲೆನ್ಸು ಕಾಗದವನ್ನು ಸುಡಲಾರದು. ಮೇಘ ಚದುರಿ ಹೋದರೆ ಆಗ ಅದು ಸುಟ್ಟುಹೋಗುತ್ತದೆ.

ಶ್ರೀರಾಮಕೃಷ್ಣ ವಚನವೇದದಿಂದ